# ಪ್ರಹಸನ ಪ್ರಸಂಗ

ನಾವು ಬಾಹ್ಯ ವಿಷಯಗಳಲ್ಲಿ ತನ್ಮಯರಾಗಿ ನಮ್ಮನ್ನು ನಾವು ಮರೆತುಬಿಡುತ್ತೇವೆ. ಈ ಆತ್ಮವಿಸ್ಮೃತಿಯಿಂದಾಗಿ ನಾವು ಏನು ಮಾಡುತ್ತಿರುವೆವೆಂಬುದರ ಅರಿವೇ ನಮಗಿರುವುದಿಲ್ಲ. ಕ್ರಮೇಣ ನಮಗರಿವಿಲ್ಲದಂತೆಯೇ ಹಂತಹಂತವಾಗಿ ನಾವು ಕೆಳಗೆ ಜಾರಿ ಬಿಡುತ್ತೇವೆ.

ಒಂದು ಹೆಲಿಕಾಪ್ಟರ್ ಹಾರುತ್ತಿದೆ. ಅದರಿಂದ ಒಂದು ಹಗ್ಗ ನೇತುಬಿದ್ದಿದೆ. ಹತ್ತು ಜನ ಪುರುಷರು ಮತ್ತು ಓರ್ವ ಮಹಿಳೆ ಹಗ್ಗವನ್ನು ಹಿಡಿದುಕೊಂಡು ನೇತಾಡುತ್ತಿದ್ದಾರೆ. ಹಗ್ಗ ದುರ್ಬಲವಾಗಿರುವುದರಿಂದ ಅಷ್ಟು ಜನರ ತೂಕವನ್ನು ತಡೆಯಲಾರದ ಸ್ಥಿತಿಯಲ್ಲಿತ್ತು. ಯಾರಾದರೂ ಒಬ್ಬರು ಕೆಳಗೆ ಧುಮುಕಿದರೆ ಉಳಿದವರು ಬದುಕುಳಿಯಬಹುದಿತ್ತು. ಈಗ ಯಾರು ಧುಮುಕುವುದೆಂದು ಅವರವರಲ್ಲಿ ಚರ್ಚೆ ನಡೆಯಿತು. ಯಾರೂ ತಮ್ಮ ಜೀವ ಕಳೆದುಕೊಳ್ಳುವುದಕ್ಕೆ ಸಿದ್ಧರಿರಲಿಲ್ಲ.

ಕೊನೆಗೆ ಆ ಮಹಿಳೆ ಇತರರಿಗಾಗಿ ತನ್ನ ಜೀವನವನ್ನು ತ್ಯಾಗ ಮಾಡುತ್ತೇನೆ ಎಂದು ಸಾರಿದಳು. ಪುರುಷರೆಲ್ಲ ಸಂತೋಷದಿಂದ ಅದಕ್ಕೆ ಒಪ್ಪಿದರು. ಆಕೆ ಹಗ್ಗವನ್ನು ಬಿಡುವುದಕ್ಕೆ ಮುಂಚೆ ಅತ್ಯಂತ ಹೃದಯಸ್ಪರ್ಶಿಯಾದ ಕಿರು ಭಾಷಣವನ್ನು ನೀಡಿದಳು. ಹಿಂದಿನಿಂದಲೂ ಮಹಿಳೆಯರು ತಮ್ಮ ಪತಿ ಮತ್ತು ಮಕ್ಕಳಿಗಾಗಿ ತಮ್ಮದೆಲ್ಲವನ್ನೂ ತ್ಯಾಗ ಮಾಡುತ್ತಾ ಬಂದಿರುವರು, ತಾನೂ ಅದೇ ರೀತಿ ಈಗ ತ್ಯಾಗ ಮಾಡುತ್ತಿರುವುದಾಗಿ ಅವಳು ನುಡಿದಳು. ಅವಳು ಭಾಷಣ ಮುಗಿಸಿದ ಕೂಡಲೆ ಪುರುಷರೆಲ್ಲರೂ ಚಪ್ಪಾಳೆ ಹಾಕಲು ಪ್ರಾರಂಭಿಸಿದರು.

❄ ❄ ❄ ❄ ❄ ❄

ನಮ್ಮ ಅಹಂಕಾರದ ದೆಸೆಯಿಂದ ನಮ್ಮ ಮಿತಿಯನ್ನು ನಾವು ಅರ್ಥಮಾಡಿಕೊಳ್ಳುವುದೇ ಇಲ್ಲ. ಯಾರಾದರೂ ನಮ್ಮನ್ನು ಹೊಗಳಿದಾಗ ಆ ಹೊಗಳಿಕೆಗೆ ತಲೆದೂಗುತ್ತೇವೆಯೇ ಹೊರತು ಆ ಹೊಗಳಿಕೆಗೆ ನಾನು ಅರ್ಹನೇ ಎಂದು ಆಲೋಚಿಸುವುದೇ ಇಲ್ಲ.

ಒಂದು ಆಶ್ರಮದ ಮುಖ್ಯಸ್ಥನಿಗೆ ಇನ್ನೊಂದು ಆಶ್ರಮಕ್ಕೆ ವರ್ಗಾವಣೆಯಾಗಿತ್ತು. ಅವನಿಗೆ ಬೀಳ್ಕೊಡಿಗೆಯ ಸಮಾರಂಭ ನಡೆಯಿತು. ಅನೇಕ ಜನ ಭಕ್ತರು ನೆರೆದಿದ್ದರು. ಸಮಾರಂಭದ ಕೊನೆಯಲ್ಲಿ ಹಣ್ಣು ಹಣ್ಣು ಮುದುಕಿಯೊಬ್ಬಳು ಮುಖ್ಯಸ್ಥನ ಹತ್ತಿರ ಬಂದು ಕಣ್ಣೀರು ಸುರಿಸುತ್ತ ಹೇಳಿದಳು: "ಸ್ವಾಮಿ, ನೀವು ಹೋದರೆ ನಮ್ಮ ಗತಿಯೇನು? ಮುಂದೆ ಎಂಥವರು ಬರುತ್ತಾರೊ ಯಾರಿಗೆ ಗೊತ್ತು."

ಮುಖ್ಯಸ್ಥನು ಆಕೆಯನ್ನು ಸಮಾಧಾನಪಡಿಸುತ್ತ ಹೇಳಿದ: "ನೋಡಮ್ಮ, ನೀನೇನೂ ಯೋಚಿಸಬೇಡ. ಮುಂದೆ ನನ್ನ ಸ್ಥಾನದಲ್ಲಿ ಬರುವವರು ನನಗಿಂತ ಉತ್ತಮ ವ್ಯಕ್ತಿಗಳಾಗಿರುತ್ತಾರೆ."

ಮುದುಕಿ: "ಇಲ್ಲ, ಹಿಂದಿನ ಸ್ವಾಮಿಗಳಿಗೆ ವರ್ಗವಾದಾಗಲೂ ಅವರು ಹೀಗೆಯೇ ಹೇಳಿಹೋಗಿದ್ದರು."


❄ ❄ ❄ ❄ ❄ ❄

ನಾವು ಕೆಟ್ಟದ್ದನ್ನು ಮಾಡುವಾಗ ಅದರ ದುಷ್ಪರಿಣಾಮಗಳ ಬಗ್ಗೆ ಚಿಂತಿಸುವುದೇ ಇಲ್ಲ. ಚಿಂತಿಸಿದರೂ ಪರಿಣಾಮಕಾರಿಯಾಗಿ ಅವುಗಳನ್ನು ಭಾವಿಸುವುದಿಲ್ಲ. ನಾವು ಕೆಟ್ಟದ್ದನ್ನು ಮಾಡುತ್ತಾ ಹೋಗುತ್ತೇವೆ. ಮುಂದೊಂದು ದಿನ ಮನಃಪರಿವರ್ತನೆ ಉಂಟಾಗಿ ಸನ್ಮಾರ್ಗದ ಕಡೆ ತಿರುಗಿದಾಗ ಹಿಂದೆ ಮಾಡಿದ ದುಷ್ಕರ್ಮದ ಸಂಸ್ಕಾರಗಳೆಲ್ಲ ಒಂದು ಬೃಹದಾಕಾರವನ್ನು ತಳೆದು ನಮ್ಮ ಮುಂದೆ ನಿಲ್ಲುತ್ತವೆ, ಮತ್ತು ಅವನ್ನು ಹೋಗಲಾಡಿಸುವುದು ದುಃಸಾಧ್ಯವಾಗಿ ಕಂಡುಬರುತ್ತದೆ. ಆಗ ನಾವು ಪರಿತಪಿಸುತ್ತೇವೆ.

ಒಂದು ಮೃಗಾಲಯ. ಅಲ್ಲಿ ಒಬ್ಬ ವ್ಯಕ್ತಿಯು ಅಳುತ್ತ ನಿಂತಿದ್ದನು. ಮೃಗಾಲಯವನ್ನು ನೋಡಲು ಬಂದ ಮಹಿಳೆಯೊಬ್ಬಳು ಅದನ್ನು ಗಮನಿಸಿದಳು. ಅವನ ಹತ್ತಿರ ಬಂದು ಅಳುವುದಕ್ಕೆ ಕಾರಣವನ್ನು ಕೇಳಿದಳು. "ಇಂದು ಒಂದು ಆನೆ ಸತ್ತುಹೋಯಿತು," ಅವನೆಂದ.

ಮಹಿಳೆ: "ಆ ಆನೆಯನ್ನು ನೀನು ತುಂಬ ಪ್ರೀತಿಸುತ್ತಿದ್ದಿರಬೇಕು, ಅದು ನಿನ್ನ ಸ್ನೇಹಿತನಾಗಿದ್ದಿರಬೇಕು, ಅಲ್ಲವೇ?"

ಆ ವ್ಯಕ್ತಿ: "ಇಲ್ಲ, ಹಾಗೇನಿಲ್ಲ, ನಾನೇ ಗುಳಿತೋಡಿ ಆ ಆನೆಯನ್ನು ಹೂಳಬೇಕಾಗಿದೆ." ❄




ಎಷ್ಟೋ ವಿಷಯಗಳನ್ನು ನಾವೇ ಅನುಭವಿಸುವವರೆಗೂ ಅವುಗಳಲ್ಲಿ ನಮಗೆ ಶ್ರದ್ಧೆ ಉಂಟಾಗುವುದಿಲ್ಲ. ಕೇವಲ ನಂಬಿಕೆ ಸಾಕಾಗುವುದಿಲ್ಲ. ಆಧ್ಯಾತ್ಮಿಕ ವಿಷಯಗಳನ್ನು ಕೇಳಿ ಅವುಗಳನ್ನು ನಂಬಿದರೆ ಸಾಕಾಗುವುದಿಲ್ಲ. ನಾವೇ ಆಧ್ಯಾತ್ಮಿಕರಾದಾಗ ಅವರಲ್ಲಿ ಸಂಪೂರ್ಣ ಶ್ರದ್ಧೆ ಉಂಟಾಗುತ್ತದೆ.

ಒಬ್ಬ ವ್ಯಕ್ತಿಯು ಏನೊ ಆಲೋಚನೆ ಮಾಡುತ್ತ ನಿಂತುಕೊಂಡಿದ್ದ. ಆಗ ಕಗ್ಗತ್ತಲು, ಸಂಪೂರ್ಣ ನಿರ್ಜನ ಪ್ರದೇಶ. ಆಗ ಇನ್ನೊಬ್ಬ ವ್ಯಕ್ತಿಯು ಅಲ್ಲಿಗೆ ಬಂದನು. ಅವನು ಆಲೋಚಿಸುತ್ತ ನಿಂತಿದ್ದ ವ್ಯಕ್ತಿಯ ಹೆಗಲ ಮೇಲೆ ಕೈ ಇಟ್ಟು ಕೇಳಿದನು : "ನಿನಗೆ ಭೂತದ ಮೇಲೆ ಶ್ರದ್ಧೆ ಇದೆಯೇ?"

"ಇಲ್ಲ, ಖಂಡಿತ ಇಲ್ಲ," ಎಂದು ಧೈರ್ಯವಾಗಿ ಉತ್ತರಿಸಿದ. ಆಗ ಬಂದ ವ್ಯಕ್ತಿಯು ಹೇಳಿದ: "ನಿಜ, ನಾನೇ ಒಂದು ಭೂತವಾಗುವವರೆಗೂ ನನಗೂ ನಂಬಿಕೆ ಇರಲಿಲ್ಲ." ❄